ದಿನಾಂಕಃ 06-10-2015

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಶ್ರೀ ಜಿ ಬಿ ಹೆಚ್ ವಕೀಲರಿಂದ ಃ –

ಪ್ರತಿವಾದಿ 1 , 2 ರವರು ನಿಪಿ- 1 ಕ್ಕೆ ಎಬ್ಬೆಟ್ಟಿನ ಗುರುತನ್ನು ಅಚ್ಚಿರುತ್ತಾರೆ. ಪ್ರತಿವಾದಿ 2 ರವರು ನಿಪ- 1 ಕ್ಕೆ ಸಹಿ ಮಾಡಿರುತ್ತಾರೆ. ಪತ್ರ ಬರೆದ ದಿನಾಂಕದಿಂದ 3 ತಿಂಗಳ ಅವಧಿಯಲ್ಲಿ ಕ್ರಯಪತ್ರ ನೊಂದಣಿಯಾಗಬೇಕೆಂದು ಮಾತುಕತೆಯಾಯಿತು. ಕ್ರಯದ ಕರಾರು ಪತ್ರದ ದಿನಾಂಕದಂದು ವಾದಿಯ ಗಂಡನ ಬಳಿ ಹಣವಿಲ್ಲದೇ ಇದ್ದುದರಿಂದ 3 ತಿಂಗಳ ಕಾಲಾವಕಾಶ ನಿಗದಿಪಡಿಸಿದ್ದರು ಎಂದರೆ ಸಾಕ್ಷಿದಾರರೂ ಪೂರ್ತಿ ಹಣ ಇರದ ಕಾರಣ ಕಾಲಾವಕಾಶ ನಿಗದಿಪಡಿಸಿದ್ದರು ಎಂದು ನುಡಿದಿರುತ್ತಾರೆ. 3 ತಿಂಗಳ ಅವಧಿಯಲ್ಲಿ ಕ್ರಯಪತ್ರ ನೊಂದಣಿಯಾಗಿಲ್ಲ. ಪ್ರತಿವಾದಿಯರು ಕ್ರಯದ ಕರಾರು ಪತ್ರ ಬರೆದುಕೊಟ್ಟಿಲ್ಲ ಹಾಗೂ ಹಣ ಸ್ವೀಕರಿಸಿಲ್ಲ ಎಂದರೆ ಸುಳ್ಳು. ನಾನು ಶಿರಾ ಪಟ್ಟಣಕ್ಕೆ ಬಂದಿಲ್ಲ. ಪತ್ರ ತಂದಿಲ್ಲ ಹಾಗೂ ಪತ್ರ ಬರೆದಿಲ್ಲ ಎಂದರೆ ಸುಳ್ಳು,

ನೀವು ಮತ್ತು ವಾದಿಯ ಗಂಡ ಎಷ್ಟು ವರ್ಷದಿಂದ ಸ್ನೇಹಿತರು ಎಂದರೆ ನಾವು ಒಂದೇ ಊರಿನಿಂದ ಪರಿಚಯ ಎಂದು ನುಡಿದಿರುತ್ತಾರೆ. ಯಾವುದೇ ವ್ಯವಹಾರ ನಡೆಯದೇ ಇದ್ದರೂ , ವಾದಿಯ ಗಂಡ ತಯಾರಿಸಿಕೊಂಡು ಬಂದ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸುಳ್ಳು.

2 ನೇ ಪ್ರತಿವಾದಿ ದ್ರಾಕ್ಷಾಯಣಿ ಎಂದು ಸಹಿ ಮಾಡಿರುತ್ತಾರೆ.

ಕರಾರು ಪತ್ರಕ್ಕೆ ಸಂಬಂಧಪಟ್ಟಂತೆ 4-5 ಬಾರಿ ಪಂಚಾಯ್ತಿ ಮಾಡಲಾಗಿದೆ. ಮೊದಲ ಬಾರಿ ಪಂಚಾಯ್ತಿ ನಡೆದ ದಿನಾಂಕ ಗೊತ್ತಿಲ್ಲ, ಕರಾರು ಪತ್ರ ಬರೆದ 3 ತಿಂಗಳ ಅವಧಿಯೊಳಗಡೆಯೇ ಪಂಚಾಯ್ತಿ ನಡೆದಿರುತ್ತದೆ. ಪಂಚಾಯ್ತಿಯಲ್ಲಿ ಭೀಮಣ್ಣ , ರಾಜಣ್ಣ , ಬೊಮ್ಮನಾಯ್ಕ , ಪ್ರತಿವಾದಿ 1 , ನಾನು ಮತ್ತು ವಾದಿಯ ಗಂಡ ಸೇರಿದ್ದೆವು. ಉಳಿದ ಕೆಲವರ ಹೆಸರು ಗೊತ್ತಿಲ್ಲ. ಪ್ರತಿವಾದಿಯರು

ಕ್ರಯದ ಕರಾರು ಪತ್ರದ ಪ್ರಕಾರ ಜಮೀನು ಕೊಡುವುದಿಲ್ಲ ಎಂದು ಹೇಳಿದ್ದಾರೆ ಎಂದು ಪಂಚಾಯ್ತಿ ನಡೆಯಿತು. ಭೀಮಣ್ಣನವರು ಜಮೀನು ಕೊಡಲಾಗುವುದಿಲ್ಲ ಎಂದು ಹೇಳಿದರು. ಇದಾದ 8-10 ದಿನಕ್ಕೆ ಮತ್ತೊಮ್ಮೆ ಪಂಚಾಯ್ತಿ ನಡೆಯಿತು. ಸದರಿ ಪಂಚಾಯ್ತಿಯಲ್ಲಿ ನಾನು ಪಾಲ್ಗೊಂಡಿರಲಿಲ್ಲ. ಉಳಿದ ಪಂಚಾಯ್ತಿಗಳಿಗೆ ನಾನು ಹೋಗಿಲ್ಲ. ನಾನು ಹೇಳಿದಂತೆ ಯಾವುದೇ ಪಂಚಾಯ್ತಿ ನಡೆದಿಲ್ಲ ಎಂದರೆ ಸುಳ್ಳು. ಪಂಚಾಯ್ತಿ ಮಾಡುವ ಪ್ರಸಂಗವೇ ಇಲ್ಲ ಎಂದರೆ ಸುಳ್ಳು.

ನಿಪಿ- 1 ಕ್ಕೆ ವೀರಣ್ಣ ಮತ್ತು ನಾನು ಸಾಕ್ಷಿದಾರರಾಗಿ ಸಹಿ ಮಾಡಿದ್ದೇವೆ. ಇಬ್ಬರು ಮಾತ್ರ ಸಾಕಿದಾರರಾಗಿ ಸಹಿ ಮೂಡಿದ್ದೇವೆ. ನಿಪಿ- 1 ಕ್ಕೆ ಯಾರು ಬಿಕ್ಲಂ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಬಿಕ್ಲಂದಾರರ ಪರಿಚಯ ನನಗೆ ಇಲ್ಲ. ಬಿಕ್ಲಂದಾರರ ಬಗ್ಗೆ ನಾನು ತಿಳಿದುಕೊಳ್ಳಲು ಹೋಗಲಿಲ್ಲ ಎಂದರೆ ಸಾಕ್ಷಿದಾರರು ಅದರ ಅಗತ್ಯತೆ ಇರಲಿಲ್ಲ ಎಂದು ನುಡಿದಿರುತ್ತಾರೆ. ನಿಪಿ- 1 ರ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸುಳ್ಳು. ವಾದಿಯ ಗಂಡ ಇಚ್ಚಿಪಟ್ಟಂತೆ ಸಹಿ ಮಾಡಿ , ಅವರು ಹೇಳಿಕೊಟ್ಟಂತೆ ಸಾಕ್ಷ್ಯಾ ಹೇಳುತ್ತಿದ್ದೇನೆ ಎಂದರೆ ಸುಳ್ಳು. ಪ್ರತಿವಾದಿಗಳು ಜಮೀನನ್ನು ಮಾರಾಟ ಮಾಡಲು ಒಪ್ಪಿಲ್ಲ , ಹಣವನ್ನು ಪಡೆದಿಲ್ಲ ಹಾಗೂ ನಿಪಿ- 1 ನ್ನು ಬರೆದುಕೊಟ್ಟಿಲ್ಲ ಎಂದರೆ ಸುಳ್ಳು. ವಾದಿಯ ಗಂಡನಿಗೆ ಸಹಾಯಮಾಡುವ ಉದ್ದೇಶದಿಂದ ಸುಳ್ಳು ಪ್ರ.ಪತ್ರ ಸಲ್ಲಿಸಿ ಸುಳ್ಳು ಸಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸುಳ್ಳು,

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಸಿರಾ.